# ಹರಿದ್ವಾರ: ನೆನಪಿನ ಚಿತ್ತಾರ



**ಒಮ್ಮೆ ಗಂಗಾರತಿಯನ್ನು ನೋಡಬೇಕು. ಅದು ಹೃದಯದಲ್ಲಿ ಉಕ್ಕಿಸುವ ಅಸಂಖ್ಯ ಭಾವನೆಗಳಿಗಾಗಿ. ವಾಸ್ತವವಾಗಿ ನೋಡಿದರೆ ಇವೆಲ್ಲ ಮಳ್ಳಲ್ಲವೇ, ಅನಗತ್ಯ ಭಾವುಕತೆಯಲ್ಲವೇ ಎನಿಸಬಹುದು. ಆದರೆ ಜೀವನ ನಿಂತಿರುವುದೇ ಅಂಥ ಭಾವುಕತೆಗಳ ಮೇಲೆ, ನಂಬಿಕೆಗಳ ಮೇಲೆ ಎಂದೂ ಅನ್ನಿಸುತ್ತದೆ.**

■ ಚಿತ್ರ– ಲೇಖನ: **ನಿರಂಜನ ವಾನಳ್ಳಿ**

ಇಲ್ಲಿನ ಉಡುಪಿ ಪೇಜಾವರ ಮಠದಲ್ಲಿ ವಸತಿ. ಊಟಮಾಡಿಕೊಂಡೇ ಹರಿದ್ವಾರ ನೋಡಲು ಹೋಗಿ ಎಂದು ಅಡಿಗೆಯವರು ಹೇಳಿದ್ದಕ್ಕೂ ಅವರ ಅಡುಗೆಮನೆಯಿಂದ ಉಡುಪಿ ಸಾಂಬಾರಿನ ಕಮ್ಮನೆ ಪರಿಮಳ ಬರುವುದುಕ್ಕೂ ಸರಿಹೋಯ್ತು. ಊಟದೊಂದಿಗೆ ಹರಿದ್ವಾರದ ದರ್ಶನ ಶುರು.

ಹರಿದ್ವಾರದ ಮುಖ್ಯ ಆಕರ್ಷಣೆ ಗುಡ್ಡದ ಮೇಲಿರುವ ಮಾನಸಾ ದೇವಿ ಹಾಗೂ ಚಂಡಿಕಾದೇವಿ ದೇವಾಲಯಗಳು. ಈ ಸ್ಥಳ ತಲುಪಲು ಇರುವ ರೋಪ್ ವೇಗಳು ಪ್ರಮುಖ ಆಕರ್ಷಣೆಗಳು. ರೋಪ್ ವೇ ನಲ್ಲಿ ಸಾಗುವಾಗ ಕೆಳಗೆ ಕಾಣುವ ಹರಿದ್ವಾರ ಹಾಗೂ ಗಂಗಾನದಿಯ ದೃಶ್ಯ ಮನೋಹರ.

ಮುಸ್ಸಂಜೆಯ ವೇಳೆಗೆ ಅಲ್ಲಿಯ ಗಂಗಾರತಿ ತುಂಬ ಹೆಸರಾಗಿದೆ. ಭಾವುಕ ಹಿಂದೂಗಳು ಅದನ್ನು ನೋಡುವ ಸಲುವಾಗಿಯೇ ಹರಿದ್ದಾರಕ್ಕೆ ಬರುತ್ತಾರೆ. ಸುಮಾರು ಐವತ್ತು ಸಾವಿರ ಜನ ಹರ್ ಕೆ ಪೋಡಿಯಲ್ಲಿ ನೆರೆದಿದ್ದರು. ಇದೇ ಗಂಗಾರತಿ ನಡೆಯುವ ಸ್ಥಳ. ಅಲ್ಲೆಲ್ಲ ಗಂಗೆಯಲ್ಲಿ ಮುಳುಗಿ ಏಳಲು ಮುನ್ನುಗ್ಗುತ್ತಲೇ ಇರುತ್ತಾರೆ. ಗಂಗಾಮಾತೆಯ ಭಜನೆ ಮೊಳಗುತ್ತದೆ. ಏಕಕಾಲಕ್ಕೆ ಸಹಸ್ರಾರು ಆರತಿಗಳು ಉಜ್ವಲನಗೊಳ್ಳುತ್ತವೆ. ಜನ ಭಕ್ತಿಯ ಉನ್ಮಾದದಲ್ಲಿ ತೇಲುವವರ ಹಾಗೆ ಕುಣಿಯುತ್ತಾರೆ. ಕೂಗುತ್ತಾರೆ, ಅಳುತ್ತಾರೆ, ಭಜನೆಮಾಡುತ್ತಾರೆ. ಕರ್ಪೂರದ ಆರತಿಯನ್ನು ಗಂಗೆಯಲ್ಲಿ ತೇಲಿಬಿಡುತ್ತಾರೆ. ನೀರಮೇಲೆ ಹರಿಯುವ ಈ ಆರತಿಗಳಿಂದಾಗಿ ಗಂಗೆಗೆ ವಿಶೇಷ ಕಳೆಬರುತ್ತದೆ. ಕುಂತಿ ತೇಲಿಬಿಟ್ಟ ಕರ್ಣನ ನೆನಪಾಯಿತು. ಕರ್ಣ ಮಹಾಭಾರತದಲ್ಲಿ ಕರ್ಪೂರದಂತೇ ಉರಿದುಹೋದ ಮಹಾನುಭಾವ. ಒಂದೊಂದು ಆರತಿಯೂ ಕರ್ಣನನ್ನು ಪ್ರತಿನಿಧಿಸಬಹುದೇ ಎನಿಸಿತು.

ಜೀವನದಲ್ಲಿ ಒಮ್ಮೆ ಗಂಗಾರತಿಯನ್ನು ನೋಡಬೇಕು. ಅದು ಹೃದಯದಲ್ಲಿ ಉಕ್ಕಿಸುವ ಅಸಂಖ್ಯ ಭಾವನೆಗಳಿಗಾಗಿ. ವಾಸ್ತವವಾಗಿ ನೋಡಿದರೆ ಇವೆಲ್ಲ ಮಳ್ಳಲ್ಲವೇ, ಅನಗತ್ಯ ಭಾವುಕತೆಯಲ್ಲವೇ ಎನಿಸಬಹುದು. ಆದರೆ ಜೀವನ ನಿಂತಿರುವುದೇ ಅಂಥ ಭಾವುಕತೆಗಳ ಮೇಲೆ, ನಂಬಿಕೆಗಳ ಮೇಲೆ ಎಂದೆನಿಸಿತು. ಎಲ್ಲಿಯೂ ಸಿಕ್ಕದ ಆತ್ಮ ಸಂತೋಷ, ಸಮಾಧಾನ, ಗಂಗೆಯ ತಟದಲ್ಲಿ ಸಿಕ್ಕಬಹುದು. ಗಂಗೆಯಲ್ಲಿ ಮಿಂದಾಗ ಅವನ ಆತ್ಮವಿಶ್ವಾಸದ ಮಟ್ಟ ಏರಬಹುದು. ಅದು ಜೀವನದಲ್ಲಿ ಮಹಾನ್ ಸಾಧನೆಗಳಿಗೆ ಕಾರಣವೂ ಆಗಬಹುದು. ಅಂಧಶ್ರದ್ಧೆಯೋ, ಸತ್ಯವೋ, ವಿಜ್ಞಾನವೋ?..

ಆ ದಿನ ಸಂಜೆ ನಾವು ಗಂಗಾರತಿ ನೋಡಲು ಹೋಗಿದ್ದಾಗ ಒಬ್ಬಾತ ನಮ್ಮ ಬಳಿ ಬಂದ. ಸಂಜೆಯ ಹೊತ್ತು,ಇವತ್ತು ಹುಣ್ಣಿಮೆ, ಗಂಗಾಪೂಜೆ ಮಾಡಿ